ಶ್ರೀ ಎಂ. ವಿ. ಕೃಷ್ಣಪ್ಪ.—ಕಾನೂನಿದೆ. ಅದರ ಪ್ರಕಾರ ಮಾಡುತ್ತೇವೆ.

ಶ್ರೀ ಕೆ. ಲಕ್ಕಪ್ಪ.— ರ್ಯಾಂಡು ಅಕ್ಸಿಸಿಪಷನ್ನು ಪ್ರೊಸೀಡಿಂಗ್ಸ್‌ನಲ್ಲಿ ಪಂಚಾಯತಿಯವರು ರೆಸಲ್ಯೂಷನ್ನುಗಳನ್ನು ಕಳಿಸಿದನಂತರ ಮಾಡುವುದರಿಂದ ರೈತರಿಗೆ ತೊಂದರೆಯಾಗುವುದಿಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ತೊಂದರೆಯಾಗುತ್ತಿದೆ ಎಂದು ಈಚೆಗೆ ಕಂಡುಬಂದಿದೆ. ಇದನ್ನು ಕಡಿಮೆ ಮಾಡುವ ಉದ್ದೇಶದಿಂದ ರೈತರು ರೆಸಲ್ಯೂಷನ್ನಿಗೆ ಕಾಯದೆ ಪಂಚಾಯತಿಯ ಕಡೆಯಿಂದ "ನಮ್ಮ ಅಭ್ಯಂತರ ಇಲ್ಲ" ಎಂದು ಬರೆಸಿಕೊಂಡು ಬಂದರೂ ಮುಂದೆ ಅಕ್ಸಿಸಿಪಷನ್ನು ಮಾಡಬಹುದು.

Compulsory Primary Education Scheme in Gadag and Mundargi Taluks of Dharwar District.

*Q.—2. Sri C. S. HULKOTI (Mundargi).—

Will the Government be pleased to state :—

(*a*) the total number of students who are receiving education under the Compulsory Primary Education Scheme in Gadag and Mundargi Taluks in Dharwar District :

(*b*) the total number of rooms constructed by the Government or by the District School Board, Dharwar, that are available for accommodation of students coming under the Compulsory Primary Education Scheme at present in the said taluks ;

(*c*) whether the present number of rooms available for accommodation is sufficient ; and if not, how many more rooms will be required for accommodation ;

(*d*) the places at which the classes of excess number of students are held now ;

(*e*) whether they are aware the holding of classes in temples, mosques, etc, is causing a good deal of annoyance and disturbance both to the teachers and the students ?

A.—Sri S. R. KANTHI (Minister for Education)—

(*a*) 16,256.

(*b*) Sixty-three rooms constructed under the District Building Committee Scheme and 143 other rooms.

(*c*) No. 276 more rooms are required.

(*d*) In temples, mosques rent free and rented buildings.

(*e*) Yes.

ಶ್ರೀ ಸಿ. ಎಸ್. ಹುಲ್ಕೋಟಿ.— ಮುಂಡರಗಿ ತಾಲ್ಲೂಕುಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

†ಶ್ರೀ ಎಸ್. ಆರ್. ಕಂಠಿ.—ತಾವು ಗದಗ ಮತ್ತು ಮುಂಡರಗಿ ಎರಡು ತಾಲ್ಲೂಕುಗಳ ಒಟ್ಟು ಸಂಖ್ಯೆ ಕೇಳಿದ್ದೀರಿ. ಅದರಂತೆ ಕೊಟ್ಟಿದೆ. ಮುಂಡರಗಿ ತಾಲ್ಲೂಕಿನ Break up ಇಲ್ಲಿಲ್ಲ.

ಶ್ರೀ ಸಿ. ಎಸ್. ಹುಲ್ಕೋಟಿ.— ಮುಂಡರಗಿ ತಾಲ್ಲೂಕಿನೊಳಗೆ ಹೊಸದಾಗಿ ಶಾಲೆಗೆ ಕಟ್ಟಡಗಳನ್ನೂ ಪ್ರಾರಂಭಿಸುವ ಸಂಖ್ಯೆ ಎಷ್ಟು ?

ಶ್ರೀ ಎಸ್. ಆರ್. ಕಂಠಿ.—ತಾವು ಪ್ರಶ್ನೆಯನ್ನು ಎರಡು ತಾಲ್ಲೂಕುಗಳನ್ನೂ ಕೂಡಿಸಿ ಕೇಳಿದ್ದೀರಿ. ಅದರಂತೆ ಇಲ್ಲ ಕೊಟ್ಟಿದೆ. ಬ್ರೇಕ್ ಅಪ್ ಈಗ ಇಲ್ಲಿಲ್ಲ.

ಶ್ರೀ ಸಿ. ಎಸ್. ಹುಲ್ಕೋಟಿ.—ಹೊಸ ಸ್ಕೀಮಿನ ಪ್ರಕಾರ ಕಟ್ಟಡ ಕಟ್ಟಲಿಕ್ಕೆ ಒಂದು ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಇದೆ. ಈ ಪ್ರಕಾರ ಎಷ್ಟು ಮಾಗಣಿ ಇಲ್ಲಿಯತನಕ ಬಂದಿದೆ ?

ಶ್ರೀ ಎಸ್. ಆರ್. ಕಂಠಿ.— ಮಾಗಣಿಗಳನ್ನು ವಿಚಾರ ಮಾಡಿಕೊಂಡು ಮತ್ತು ಹೊಸದಾಗಿ ಶಾಲಾ ಕಟ್ಟಡಗಳನ್ನು ಕಟ್ಟಲಿಕ್ಕೂ ದುಡ್ಡನ್ನು ಕೊಡುವ ವಿಚಾರವೂ ಇದೆ.

ಶ್ರೀ ಜಿ. ವಿ. ಗೌಡ.—62-63ನೇ ವರ್ಷಕ್ಕಾಗಿ ದುಡ್ಡನ್ನು ಕೊಡುವುದಾಗಿದ್ದರೆ ಮಾರ್ಚ್ 31ನೇ ತಾರೀಖಿನೊಳಗೇ ಕೊಡಬೇಕು. ಹಾಗೆ ಈಗ ಏನು ಕೊಟ್ಟಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—ಈಗಾಗಲೇ ದುಡ್ಡನ್ನು ಕೊಟ್ಟಿದೆ. ಇದನ್ನು ಡೆಪ್ಯುಟೇ ಕಮಿಷನರ ವಶಕ್ಕೆ ಕೊಡರಾಗಿದೆ.

ಶ್ರೀ ಟಿ. ಕೆ. ಕಂಬ್ಳಿ.—ಈ ರೀತಿ ಧಾರವಾಡ ಜಿಲ್ಲೆಗೆ ಎಷ್ಟು ದುಡ್ಡು ಕೊಟ್ಟಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—ಧಾರವಾಡ ಜಿಲ್ಲೆಯ ಪ್ರಶ್ನೆ ಇಲ್ಲಿ ಬರುವುದಿಲ್ಲ.

ಶ್ರೀ ಜಿ. ವಿ. ಗೌಡ.—ಉತ್ತರದಲ್ಲಿರುವಂತೆ ೨೭೬ ಹೆಚ್ಚಿನ ಕೊಠಡಿಗಳಿಗೆ ತರಾ ಒಂದು ಸಾವಿರ ರೂಪಾಯಿನಂತೆ ಬೇಕಾಗುವಷ್ಟು ಹಣವನ್ನು ಈಗಾಗಲೇ ಡೆಪ್ಯುಟೇ ಕಮಿಷನರ ವಶಕ್ಕೆ ಕೊಡರಾಗಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಹಾಗಲ್ಲ. ಈ ವರ್ಷ ಏನು ದುಡ್ಡು ಕೊಟ್ಟಿದಿಯೋ ಅದರ ಬ್ರೇಕ್ ಅಪ್ ಪ್ರತಿಯೊಂದು ಜಿಲ್ಲೆಗೂ ಆಗಿದೆ. ನನ್ನ ನೆನಪಿರುವ ಪ್ರಕಾರ ಧಾರವಾಡ ಜಿಲ್ಲೆಗೆ ಸುಮಾರು ೩೦,೦೦೦ ರೂಪಾಯಿಗಳಷ್ಟು ಕೊಟ್ಟಿದ್ದೇವೆ.

ಶ್ರೀ ಟಿ. ಮಾದಯ್ಯಗೌಡ.—ದೇವಸ್ಥಾನಗಳಲ್ಲಿ ಮಸೀದಿಗಳಲ್ಲಿ ಶಾಲೆಗಳನ್ನು ನಡೆಸುತ್ತಿರತಕ್ಕದ್ದು ಗದಗ ಮತ್ತು ಮುಂಡರಗಿ ತಾಲ್ಲೂಕುಗಳಲ್ಲಿ ಸಾತ್ಯವೇನೋ ಇಲ್ಲವೇ ಬೇರೆ ಇತರ ಎಲ್ಲಾ ತಾಲ್ಲೂಕುಗಳಲ್ಲಿಯೂ ಇದೆಯೋ ?

ಶ್ರೀ ಎಸ್. ಆರ್. ಕಂಠಿ.— ಎಲ್ಲ ತಾಲ್ಲೂಕುಗಳಲ್ಲಿಯೂ ಇದೆ.

ಶ್ರೀ ಟಿ. ಮಾದಯ್ಯಗೌಡ.— ಎಲ್ಲ ತಾಲ್ಲೂಕುಗಳಲ್ಲಿರುವ ಸ್ಥಿತಿ ನೋಡಿಕೊಂಡು ಎಷ್ಟು ಶಾಲೆಗಳನ್ನು ಮಾಡಬಹುದು ಎನ್ನುವುದನ್ನು ಸರಕಾರ ಯೋಚಿಸಿ ಅದನ್ನು ನಿವಾರಣೆ ಮಾಡಲು ಏನು ಯೋಚನೆ ಮಾಡಿದ್ದಾರೆ ?

ಶ್ರೀ ಎಸ್. ಆರ್. ಕಂಠಿ.—ಈ ರೀತಿ ಎಲ್ಲ ಕಡೆಗೂ ಇದೆ. ಇದೊಂದು ದೊಡ್ಡ ಪ್ರಶ್ನೆ ಸರಕಾರದ ಮುಂದಿದೆ. ಇದರ ಬಗ್ಗೆ ವಿಚಾರ ಮಾಡುತ್ತಿದ್ದೇವೆ.

ಶ್ರೀ ಸಿ. ಎಸ್. ಹುಲ್ಕೋಟಿ.— ಮುಂದರಗಿ ತಾಲ್ಲೂಕಿನಲ್ಲಿ ಶಾಲೆಗಳು ಎಷ್ಟು ರೆಂಟೆಡ್ ಬಿಲ್ಡಿಂಗ್ಸ್ ನಲ್ಲಿವೆ ?

ಶ್ರೀ ಎಸ್. ಆರ್. ಕಂಠಿ.—ಇದರ ವಿವರ ಈಗ ಇಲ್ಲಿಲ್ಲ. ಇಲ್ಲಿ ಎರಡು ತಾಲ್ಲೂಕುಗಳ ಒಟ್ಟಿನ ವಿವರ ಗಳನ್ನು ಮಾತ್ರ ಕೊಟ್ಟಿದೆ.

Sri G. V. GOWDA.—I want to know whether the amount allotted to the Deputy Commissioners would be distributed by the Deputy Commissioner according to his own discretion or place it before the Development Council for distribution ?

Sri S. R. KANTHI.—It would be placed before the Development Council.

ಶ್ರೀ ಟಿ. ಕೆ. ಕಂಬ್ಳಿ.—ಡೆವಲಪ್‌ಮೆಂಟು ಕೌನ್ಸಿಲ್ಲ ನಲ್ಲಿ ಇಡದೇ D.E.O. ರವರೇ ಕೊಟ್ಟಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಅಂತಹದೇನಿಲ್ಲ. ಇದರ ಬಗ್ಗೆ ನೋಡಿಸುತ್ತೇನೆ.

ಶ್ರೀ ಪಿ. ಮುಸಿಯಪ್ಪ.—ಅಕಾಮೊಡೇಷನ್ನು ಕಡಿಮೆ ಬಂದಿರುವ ಗ್ರಾಮಗಳಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಪಂಚಾಯತಿಯವರು, ತಾಲ್ಲೂಕು ಬೋರ್ಡುಗಳವರು ಸಲಹೆಯನ್ನು ಕೊಟ್ಟಮೇಲೂ ಸರಕಾರ ಸಹಾಯವನ್ನು ಕೊಡದೇ ಇರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಸಹಾಯವನ್ನು ಎಲ್ಲೆಲ್ಲ ಕೊಡಬೇಕು ಎನ್ನುವುದರ ಬಗ್ಗೆ ಪ್ರತಿಯೊಂದು ಕೇಸನ್ನೂ ಎಕ್ಸಾಮಿನ್ ಮಾಡಿಕೊಡಬೇಕಾಗುತ್ತದೆ.

Sri ANNA RAO GANAMUKHI.—In answer to (*d*) you have stated that schools are held in temples, mosques, rent free and rented buildings. It is highly objectionable and incorrect to say that a school runs in a mosque. Therefore, can you correct it to say that it is not in mosques, but buildings attached to the mosques ?

Mr. SPEAKER.—He has more knowledge and more experience.

ಶ್ರೀ ಪಿ. ಮುಸಿಯಪ್ಪ.—ಹಿರಿಯೂರು ತಾಲ್ಲೂಕಿನಲ್ಲಿ ತಾಲ್ಲೂಕುಬೋರ್ಡಿನವರು ಪ್ರೈಮರಿ ಶಾಲಾ ಕಟ್ಟಡ ಗಳನ್ನು ಕಟ್ಟುವುದಕ್ಕೋಸ್ಕರ ಒಂದು ಲಕ್ಷ ರೂಪಾಯಿ ಗಳಷ್ಟು ಸಾಲವನ್ನು ಕೇಳಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಈ ಪ್ರಶ್ನೆ ಬೇರೆ ಯಾಯಿತು. ಇಲ್ಲಿ ಬರುವುದಿಲ್ಲ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.— ಡೆಪ್ಯುಟಿ ಕಮಿಷನರಿಗೆ ಹಣ ಕೊಟ್ಟಿದೆ ಎಂದು ಹೇಳಿದಿರಿ. ಅದು ತಲುಪಿದೆಯೇ ಎನ್ನುವುದನ್ನಾದರೂ ತಾವು verify ಮಾಡಿದ್ದೀರಾ ?

ಶ್ರೀ ಎಸ್. ಆರ್. ಕಂಠಿ.—Verify ಮಾಡಿದ್ದೇನೆ. ಅದು ತಲುಪಿದೆ.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್.— ಆದರೆ ಈಚೆಗೆ ನಡೆದ ಮೈಸೂರಿನ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟು ಕೌನ್ಸಿಲ್ಲಿನಲ್ಲಿ ಇನ್ನೂ ಬಂದಿಲ್ಲ ಎನ್ನುವುದು ತಿಳಿಯುತ್ತು.

ಶ್ರೀ ಎಸ್. ಆರ್. ಕಂಠಿ.—ಈ ಪ್ರಸಂಗ ಬೇರೆ. ದುಡ್ಡು ತಲುಪಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಯಾವ ತಾರೀಖಿನಲ್ಲಿ ತಲುಪಿದೆ ?

ಶ್ರೀ ಎಸ್. ಆರ್. ಕಂಠಿ.— ಅದನ್ನು ಹೇಳುವುದಕ್ಕಾಗುವುದಿಲ್ಲ.

Opening of a Feeder Channel from Sangenahally Tank of Ginigenahalla to Naikanahatti Hirekere.

*Q.—9. Sri B. L. GOWDA (Challakere).—

Will the Government be pleased to state :—

(*a*) whether there is a demand from the ryots of Naikanahatty Hobli in Challakere Taluk for opening a feeder channel from Sangenahally tank of Ginigehalla to Naikanahatti Hirekere, for a long time ;

(*b*) whether it has been surveyed ;

(*c*) if so, the estimated cost ;

(*d*) whether it has come to their notice that this will be a protective work in this draught stricken area and the seepage water from this serves more than 25 villages down below ?

*A.—Sri S. NIJALINGAPPA (Chief Minister).—

(*a*) Yes.

(*b*) No.

(*c*) Does not arise in view of reply to clause (*b*).

(*d*) This can only be answered after survey and investigation.

ಶ್ರೀ ಬಿ. ಎಲ್. ಗೌಡ.—ಈ ವಿಚಾರ ಸರಕಾರದ ಮುಂದೆ ಎಷ್ಟು ವರ್ಷಗಳಿಂದ ಬರುತ್ತಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ನನ್ನ ಹತ್ತಿರವೇ ಇರುವುದರಿಂದ ಇದು ಸುಮಾರು ಇಪ್ಪತ್ತು ವರ್ಷ ಗಳಿಂದಲೂ ಬರುತ್ತಿದೆ.

ಶ್ರೀ ಬಿ. ಎಲ್. ಗೌಡ.— ಇದರ ಬಗ್ಗೆ ಸರ್ವೆ ಮಾಡಲು ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಇದಕ್ಕೆ ವಿರೋಧ ವಾಗಿಯೂ ಅರ್ಜಿಗಳು ಬಂದಿವೆ. ಇದನ್ನು ಕಟ್ಟ ಕೂಡದು, ಕಟ್ಟಿದರೆ ಕೆಳಗಡೆ ಇರತಕ್ಕ ಜನರ ಭೂಮಿಗೆ ತೊಂದರೆಯಾಗುತ್ತದೆ ಎಂದು ತಕರಾರು ಮಾಡು ತ್ತಿದ್ದಾರೆ. ಇದನ್ನೆಲ್ಲಾ ಸರಿಯಾಗಿ ಪರಿಶೀಲಿಸಿ ಎಷ್ಟು